ಶ್ರೀ ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು. ಬಂದಿದ್ದ ಟೆಂಡರ್ ಅನುಮೋದಿಸಿ, ಶುಚಿತ್ವ ಕಲಸವನ್ನು ಮಹಿಸಿಕೊಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಸಕಲೇಶಪುರ ನಗರದ ಬೈಪಾಸ್ ರಸ್ತೆ.

646 - ಶ್ರೀ ಬಿ.ಜಿ. ಶಿವಪ್ಪ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ನಗರ ಬೈಪಾಸ್ ರಸ್ತೆಯ ಕೆಲಸ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು?

ಆ) ಈ ಕಾಮಗಾರಿ ಕೆಲಸ ಯಾವ ಹಂತದಲ್ಲಿದೆ? ಇದನ್ನು ಮುಗಿಸಲು ಇನ್ನು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬೈಪಾಸ್ ನಿರ್ಮಿಸಲು ಅವಶ್ಯಕವಾದ ಭೂಸ್ವಾಧೀನಕ್ಕೆ 149 ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ಕೇಂದ್ರ ಸಾರಿಗೆ ಸಚಿವಾಲಯಕ್ಕೆ ಕಳುಹಿಸಲಾಗಿದ್ದು ಮಂಜೂರಾತಿ ನಿರೀಕ್ಷಿಸಲಾಗಿದೆ.

ಆ) ಕೇಂದ್ರ ಸಾರಿಗೆ ಸಚಿವಾಲಯದಿಂದ ಮಂಜೂರಾತಿ ದೊರೆತಿಲ್ಲವಾದ್ದರಿಂದ ಕಾಮಗಾರಿ ಪ್ರಾರಂಭಿಸಿಲ್ಲ.

ಜವಾಹರ್ ರೋಜ್ ಗಾರ್ ಯೋಜನೆಯ ಹೊತ್ತ.

647 - ಶ್ರೀ ಬಿ.ಜಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ 94-95, 95-96ನೇ ಸಾಲಿಗೆ ಸಕಲೇಶಪುರ ಮತ್ತು ಆಲೂರು ತಾಲ್ಲೂಕಿಗೆ ನಿಗದಿ ಮಾಡಿದ ಹಣ ಎಷ್ಟು, ಬಿಡುಗಡೆಯಾದ ಹಣ ಎಷ್ಟು, ವಿನಿಯೋಗವಾದ ಹಣ ಎಷ್ಟು;

ಆ) ಅದರಲ್ಲಿ ಕೇಂದ್ರ ಸರ್ಕಾರದ ಹಣ ಎಷ್ಟು, ರಾಜ್ಯ ಸರ್ಕಾರದ ಹಣ ಎಷ್ಟು,

ಇ) ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಕುಡಿಯುವ ನೀರಿನ ಯೋಜನೆ ಎಷ್ಟು? (ಎಸ್ ಆರ್ ಡಬ್ಲ್ಯೂಎಸ್ ಹಾಗೂ ಮಿನಿ ವಾಟರ್ ಯೋಜನೆ)

ಶ್ರೀ ಎಂ.ಪಿ. ಪ್ರಕಾಶ್. (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :